ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

6

ಇಲಾಖೆ / ವಿಷಯ : DEPARTMENT / SUBJECT: ಅಂತರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 9/11/20

**ಒನ್‌ಲೈನ್** ಪಶ್ಚಿಮ ಘಟ್ಟದ 56,825 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿ ಕೇಂದ್ರ ಪರಿಸರ ಸಚಿವಾಲಯ

# ಅಮೆರಿಕ ಒಗ್ಗೂಡಿಸುವೆ: ಬೈಡೆನ್

ಕ.ಪ್ರ. 9/11/20

## ವಿಭಜಿಸುವ ಅಧ್ಯಕ್ಷ ಆಗಲ್ಲ | ದೇಶಕ್ಕೆ ಗಾಯ ಆಗಿದೆ, ಉಪಚರಿಸೋಣ: ವಿಜಯೋತ್ಸವ ಭಾಷಣ

• **ಪಿಟಿಐ** ವಾಷಿಂಗ್ಟನ್

ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಜೋ ಬೈಡೆನ್, ದೇಶವನ್ನು ಒಗ್ಗೂಡಿಸುವ ವಾಗ್ದಾನ ಮಾಡಿದ್ದಾರೆ. 'ಅಮೆರಿಕಕ್ಕೆ ಆದ ಗಾಯಗಳನ್ನು ಉಪಚರಿಸಿ ನಿವಾರಿಸುವ ಸಮಯ ಇದು' ಎಂದು ನುಡಿದಿದ್ದಾರೆ.

ತಮ್ಮ ಸಮೀಪದ ಪ್ರತಿಸ್ಪರ್ಧಿ ಆಗಿದ್ದ ನಿರ್ಗಮಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಮಣಿಸಿದ ಬಳಿಕ ಶನಿವಾರ ರಾತ್ರಿ ತಮ್ಮ ತವರೂರು ಡೆಲಾವೇರ್‌ನ ವಿಲ್ಮಿಂಗ್ಟನ್‌ನಲ್ಲಿ ವಿಜಯೋತ್ಸವ ಭಾಷಣ ಮಾಡಿದ ಬೈಡೆನ್, 'ನಾನು ವಿಭಜಿಸುವ ಅಧ್ಯಕ್ಷನಾಗುವುದಿಲ್ಲ. ಬದಲಾಗಿ, ಒಗ್ಗಟ್ಟು ತರುವ ಅಧ್ಯಕ್ಷನಾಗುತ್ತೇನೆ. ನಾನು ನನ್ನ ದೇಶವನ್ನು ಕೆಂಪು ರಾಜ್ಯ (ಟ್ರಂಪ್ ಗೆದ್ದ ರಾಜ್ಯಗಳು) ಅಥವಾ ನೀಲಿ ರಾಜ್ಯ (ಬೈಡೆನ್ ಗೆದ್ದ ರಾಜ್ಯಗಳು) ಎಂದು ನೋಡುವುದಿಲ್ಲ. ಬದಲಾಗಿ ನಾನು ಇದನ್ನು ಸಂಯುಕ್ತ ಅಮೆರಿಕ ರಾಷ್ಟ್ರವನ್ನಾಗಿ ನೋಡುತ್ತೇನೆ' ಎಂದು ಭಾವುಕರಾಗಿ ನುಡಿದರು.

'ನನಗೆ ಮತ ಹಾಕಿ, ನನ್ನಲ್ಲಿ ವಿಶ್ವಾಸ ಪ್ರಕಟಿಸಿದ್ದೀರಿ. ಇದಕ್ಕಾಗಿ ನಾನು ವಿನಮ್ರನಾಗಿದ್ದೇನೆ. ಇದು ಸ್ಪಷ್ಟ ಗೆಲುವು. ಎಲ್ಲ ಜನತೆಯ ಗೆಲುವು' ಎಂದು ಹರ್ಷೋದ್ಗಾರದ ನಡುವೆ ಹೇಳಿದರು.

ಇದೇ ವೇಳೆ ಟ್ರಂಪ್ ಅಭಿಮಾನಿಗಳಿಗೂ ಸಂದೇಶ ನೀಡಿದ ಅವರು, 'ನಿಮಗೆ ನಿರಾಶೆಯಾಗಿದೆ ಎಂದು ನನಗೆ ಅರ್ಥವಾಗಿದೆ. ಆದರೆ ನನಗೆ ಮತ ಹಾಕಿದವರಿಗಷ್ಟೇ ನಾನು ಅಧ್ಯಕ್ಷನಲ್ಲ. ನಿಮಗೂ ಕೂಡ ನಾನು ಅಧ್ಯಕ್ಷ. ಪರಸ್ಪರರು ಅವಕಾಶ ನೀಡೋಣ. ಇದು ಅಮೆರಿಕಕ್ಕೆ ಆದ ಗಾಯ ಉಪಚರಿಸುವ ಸಮಯ. ದೇಶದ ಆತ್ಮಗೌರವ ಮರುಸ್ಥಾಪಿಸೋಣ. ದೇಶದ ಬೆನ್ನೆಲುಬಾದ ಮಧ್ಯಮ ವರ್ಗಕ್ಕೆ ಪುನಶ್ಚೇತನ ಕೊಡೋಣ. ಅಮೆರಿಕವನ್ನು ವಿಶ್ವದಲ್ಲಿ ಮತ್ತೆ ಗೌರವಯುತ ದೇಶವನ್ನಾಗಿ ಮಾಡೋಣ. ಇದಕ್ಕಾಗಿ ಎಲ್ಲರೂ ಒಗ್ಗೂಡೋಣ' ಎಂದರು.

'ನಾವು ವೈರಿಗಳಲ್ಲ. ನಾವೆಲ್ಲರೂ ಅಮೆರಿಕನ್ನರು. ಕೊರೋನಾ ವಿರುದ್ಧ ಯುದ್ಧ ಮಾಡೋಣ. ಆರೋಗ್ಯ ವ್ಯವಸ್ಥೆ ಸುಧಾರಿಸೋಣ. ಆರ್ಥಿಕತೆಗೆ ಪುನಶ್ಚೇತನ ಕೊಡೋಣ. ವರ್ಣಭೇದ ನೀತಿ, ಪರಿಸರ ಮಾಲಿನ್ಯದ ವಿರುದ್ಧ ಹೋರಾಡೋಣ' ಎಂದೂ ಕರೆ ನೀಡಿದರು.



### ಸೋಲೊಪ್ಪುವಂತೆ ಟ್ರಂಪ್ ಮನವೊಲಿಕೆಗೆ ಅಳಿಯ ಯತ್ನ

ವಾಷಿಂಗ್ಟನ್: ತೀವ್ರ ಪೈಪೋಟಿ ನೀಡಿ ಪರಾಭವಗೊಂಡಿರುವ ಫಲಿತಾಂಶವನ್ನು ಒಪ್ಪಿಕೊಳ್ಳುವಂತೆ ಅಳಿಯ ಜೆರೇಡ್ ಕುಶ್ನೆರ್ ಅವರು ಟ್ರಂಪ್ ಅವರನ್ನು ಮನವೊಲಿಸಲು ಯತ್ನಿಸಿರುವುದಾಗಿ ವರದಿಯಾಗಿದೆ.

### 4 ವರ್ಷ ಬಳಿಕ ಅಮೆರಿಕ ಅಧ್ಯಕ್ಷರ ಮನೆಗೆ ನಾಯಿ

ವಾಷಿಂಗ್ಟನ್: ಬೈಡೆನ್ ಮತ್ತು ಅವರ ಪತ್ನಿ ಜಿಲ್ ಅಮೆರಿಕ ಅಧ್ಯಕ್ಷರ ಅಧಿಕೃತ ನಿವಾಸ ಶ್ವೇತ ಭವನದಲ್ಲಿ 2 ನಾಯಿಗಳನ್ನು ಸಾಕಲಿದ್ದಾರೆ. ಈ ಮೂಲಕ 4 ವರ್ಷಗಳ ನಂತರ ನಾಯಿಗಳು ವೈಟ್‌ಹೌಸ್ ಪ್ರವೇಶಿಸಲಿವೆ.

### ಕಮಲಾ ಗೆದ್ದಿದ್ದಕ್ಕೆ ತ.ನಾಡಲ್ಲಿ ಸಂಭ್ರಮ

ತಿರುವರೂರು: ಅಮೆರಿಕ ಉಪಾಧ್ಯಕ್ಷರಾಗಿ ಕಮಲಾ ಹ್ಯಾರಿಸ್ ಅವರು ಆಯ್ಕೆಯಾದ ಹಿನ್ನೆಲೆಯಲ್ಲಿ ಹ್ಯಾರಿಸ್ ಅವರ ತವರು ತಮಿಳುನಾಡಿನ ತುಳಸೇಂದ್ರ ಪುರಂ ಮತ್ತು ಪೈಂಗನಾಡು ಗ್ರಾಮಗಳಲ್ಲಿ ಭಾನುವಾರ ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಗಿದೆ.

## ಟ್ರಂಪ್‌ಗೆ 3ನೇ ಪತ್ನಿ ಶೀಘ್ರ ವಿಚ್ಛೇದನ?

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚುನಾವಣೆಯಲ್ಲಿ ಸೋಲುತ್ತಿದ್ದಂತೆ ಅವರ ಪತ್ನಿ



ಮೆಲಾನಿಯಾ ಟ್ರಂಪ್ (50) ವಿಚ್ಛೇದನ ನೀಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಅಧ್ಯಕ್ಷೀಯ ಅವಧಿ ಪೂರ್ಣಗೊಂಡು ಟ್ರಂಪ್ ಶ್ವೇತಭವನದಿಂದ ಹೊರಬರುತ್ತಿದ್ದಂತೆ ಮೆಲಾನಿಯಾ ವಿಚ್ಛೇದನ ನೀಡಲಿದ್ದಾರೆ ಎಂದು ಇಬ್ಬರು ಮಾಜಿ ಅಧಿಕಾರಿಗಳು ಹೇಳಿದ್ದಾರೆ. 74 ವರ್ಷದ ಟ್ರಂಪ್‌ಗೆ ಮೆಲಾನಿಯಾ ಮೂರನೇ ಪತ್ನಿ. ಮೊದಲ ಇಬ್ಬರು ಪತ್ನಿಯರಾದ ಇವಾನ್ನಾ ಹಾಗೂ ಮಾರ್ಲಾ ಬಹಳ ಹಿಂದೆಯೇ ವಿಚ್ಛೇದನ ನೀಡಿದ್ದಾರೆ. 15 ವರ್ಷದ ಹಿಂದೆ ಮೆಲಾನಿಯಾರನ್ನು ಟ್ರಂಪ್ ಮದುವೆಯಾಗಿದ್ದರು.

## ಅಮೆರಿಕ ಕೊರೋನಾ ಪಡೆಗೆ ವಿವೇಕ್?

ವಾಷಿಂಗ್ಟನ್: ಜಗತ್ತಿನಲ್ಲೇ ಅಮೆರಿಕಕ್ಕೆ ಅತಿ ಹೆಚ್ಚು ನಷ್ಟ ಉಂಟು ಮಾಡಿರುವ ಕೊರೋನಾ ವೈರಸ್ಸನ್ನು ನಿಯಂತ್ರಿಸಲು ಅಮೆರಿಕದ ನಿಯೋಜಿತ ಅಧ್ಯಕ್ಷ ಜೋ ಬೈಡೆನ್ ಟಾಸ್ಕ್



ಫೋರ್ಸ್ ರಚನೆ ಮಾಡಲಿದ್ದು, ಅದರಲ್ಲಿ ಮಂಡ್ಯ ಮೂಲದ ಡಾ| ವಿವೇಕ್ ಮೂರ್ತಿ ಹಲ್ಲೇಗೆರೆ ಸ್ಥಾನ ಪಡೆಯುವುದು ನಿಚ್ಚಳವಾಗಿದೆ. ಕೊರೋನಾ ನಿಗ್ರಹಕ್ಕೆ ಟಾಸ್ಕ್ ಫೋರ್ಸ್ ಸೇರಿದಂತೆ ತಮ್ಮ ಯೋಜನೆಯನ್ನು ಸೋಮವಾರ ಬೈಡೆನ್ ಪ್ರಕಟಿಸಲಿದ್ದಾರೆ. ಟಾಸ್ಕ್‌ಫೋರ್ಸ್‌ನಲ್ಲಿ ಅಮೆರಿಕದ ಮಾಜಿ ಸರ್ಜನ್ ಜನರಲ್ ವಿವೇಕ್ ಮೂರ್ತಿ (43) ಹಾಗೂ ಡೇವಿಡ್ ಕೆಸ್ಲರ್ ಇರುವುದು ಬಹುತೇಕ ಖಚಿತವಾಗಿದೆ.